**Spl.C. No.3/2020**

ವಿಶೇಷ ನ್ಯಾಯಾಧೀಶರು, ಬಾಗಲಕೋಟ ಇವರ ನ್ಯಾಯಾಲಯದಲ್ಲಿ

ವಿಶೇಷ ಪ್ರಕರಣ ಸಂಖ್ಯೆ: **3/2020**

| | | | |
|---|---|---|---|
| ಹೆಸರು | : | ಹನಮಂತ ಗಾಡಿನ್ನವರ | ಫ್ರಾಸಾ-3 |
| ತಂದೆಯ ಹೆಸರು | : | ಸಣ್ಣತಮ್ಮಪ್ಪ | ಚಾಸಾ-4 |
| ವಯಸ್ಸು | : | 40 ವರ್ಷ | |
| ಉದ್ಯೋಗ | : | ಕೂಲಿಕೆಲಸ | |
| ವಾಸಸ್ಥಳ | : | ಶಿರೋಳ, ತಾ. ಮುಧೋಳ | |

ದಿನಾಂಕ: 21-08-2023 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

<u>ಮುಖ್ಯ ವಿಚಾರಣೆ: ವಿಶೇಷ ಸಾರ್ವಜನಿಕ ಅಭಿಯೋಜಕರಿಂದ:</u>

ಆರೋಪಿತರು ಪರಿಚಯ. ಚಾಸಾ-1 ರಿಂದ 5, 16 ರಿಂದ 28 ನನ್ನ ಸಂಬಂಧಿಕರು. ಕೊಲೆಯಾದ ವಿಠ್ಠಲ ಮತ್ತು ಬಂಡೆಪ್ಪ ನನ್ನ ಸಂಬಂಧಿಕರು. ನಾನು ಪಂಚನಾಗಿ ಸಾಕ್ಷಿ ಹೇಳಲು ಬಂದಿದ್ದೇನೆ. ದಿ: 16-10-2019 ರಂದು ಸಾಯಂಕಾಲ 6-30 ಗಂಟೆಗೆ ಪೋಲೀಸರು ಸಿ ಪಿ ಆಯ್ ಆಪೀಸಗೆ ಕರೆದುಕೊಂಡು ಹೋಗಿ ಅಲ್ಲಿ ರಕ್ತ ಹತ್ತಿದ ಶರ್ಟ ಮತ್ತು ದೋತರ ಹಾಗೂ ಕಾರಿನ ನಂಬರ ಪ್ಲೇಟ, ಒಂದು ಕಲ್ಲು ಇತ್ತು ಕಾರಿನ ನಂಬರ ಪ್ಲೇಟ ನಂ. ಕೆಎ-25 ಪಿ-7149. ಪೋಲೀಸರು ನನ್ನ ಸಹಿ ಮಾಡಿಸಿ ಕಳಿಸಿದ್ದಾರೆ. ಈಗ ನಾನು ಎರಡುದಾಖಲೆಗಳನ್ನು ನೋಡಿದೆ ಅವುಗಳ ಮೇಲೆ ಸಹಿ ನನ್ನದೇ ಇದ್ದು ನಿಪಿ-14 ಮತ್ತು 15 ಮತ್ತು ಸಹಿಯನ್ನು ನಿಪಿ-14 ಎ ಮತ್ತು 15 ಎ ಅಂತಾ ಗುರುತಿಸಲಾಯಿತು.

ದಿ: 17-10-2019 ರಂದು ಕೊಲೆಯಾದ ಜಾಗಕ್ಕೆ 11-30 ಗಂಟೆಗೆ ಪೋಲೀಸರು ನನ್ನನ್ನು ಕರೆದುಕೊಂಡು ಹೋಗಿ ಅಲ್ಲಿ ಟೇಪನಿಂದ ಸ್ಥಳ ಅಳತೆ ಮಾಡಿದರು. ಸ್ಥಳದಲ್ಲಿ 6 ಪೋಟೋಗಳನ್ನು ತೆಗೆದಿದ್ದು ಅವುಗಳನ್ನು ನಿಪಿ-16 ರಿಂದ 21 ಅಂತಾ ಗುರುತಿಸಲಾಯಿತು. ಪೂರ್ವಕ್ಕೆ-ಸೋಮಲಿಂಗ ಗಣಿ ಇವರ ಜಮೀನು, ಪಶ್ಚಿಮಕ್ಕೆ-ಶಂಕರ ಮರನೂರ ಇವರ ಜಮೀನು, ಉತರಕ್ಕೆ- ಕುರಿಕೊಡ್ಡಿಗೆ ಹೋಗುವ ರಸ್ತೆ, ದಕ್ಷಿಣಕ್ಕೆ-ಶಿರೋಳಕ್ಕೆ ಹೋಗುವ ರಸ್ತೆ, ಅಲ್ಲಿಂದ ನಮ್ಮನ್ನು ಮುಧೋಳ ಪೊ.ಠಾಣೆಗೆ ಕರೆದುಕೊಂಡು ಹೋಗಿ ಅಲ್ಲಿ ಮೂರು ಜನ ಆರೋಪಿತರು ಇದ್ದರು. ಅವರಿಂದ 4 ಮೊಬೈಲ್ ಮತ್ತು ಕಾರಿನ ಕೀ ಹಿಡಿಕೆ ಇತ್ತು, ಜಾಗದಲ್ಲಿ ಪೋಲೀಸರು ಮೂರು ದಾಖಲೆಗಳಿಗೆ ಸಹಿ ಪಡೆದುಕೊಂಡಿದ್ದು ಅವುಗಳನ್ನು ನಿಪಿ-22 ರಿಂದ 24

ಅಂತಾ ಗುರುತಿಸಲಾಯಿತು. ಸಹಿಯನ್ನು ನಿಪಿ-22 ಎ ದಿಂದ 24 ಎ ಅಂತಾ ಗುರುತಿಸಲಾಯಿತು. ಅಲ್ಲಿಂದ ಆರೋಪಿಗಳನ್ನು ಮತ್ತು ನಮ್ಮನ್ನು ಪ್ರತ್ಯೇಕ ಜೀಪಿನಲ್ಲಿ ಕೊಲೆಯಾದ ಜಾಗಕ್ಕೆ ಕರೆದುಕೊಂಡು ಹೋಗಿ ಜಾಗದಲ್ಲಿ 4-30 ಗಂಟೆಯವರೆಗೆ ಪಂಚನಾಮೆ ಮಾಡಿದರು. ಡಾಲ್ಮಿಯಾ ಸಿಮೆಂಟ ಪ್ಯಾಕ್ಟರಿಗೆ ಕರೆದುಕೊಂಡು ಹೋದರು. ಡಾಲ್ಮಿಯ ಸಿಮೆಂಟ ಫ್ಯಾಕ್ಟರಿ ಎದುರಿಗೆ ಎ ಒನ್ ಡಾಬಾ ಇತ್ತು. ಅದು ಮುಚ್ಚಿತ್ತು. ಅದರ ಮುಂದೆ ಒಂದು ಸಿಲ್ವರ್ ಕಲರನ ಬೋರ್ಡ್ ಪಿಜೋ ಕಾರು ಇತ್ತು. ಅದರ ಮುಂದಿನ ಬಾಗ ಡ್ಯಾಮೇಜ ಆಗಿತ್ತು. ಕಾರ ಡಿಕ್ಕಿ ಓಪನ್ ಮಾಡಿ ಅದರಲ್ಲಿ 2 ತಲವಾರು ಇದ್ದವು. ಹಾಗೂ ಮೂರು ಜನ ಆರೋಪಿತರ ರಕ್ತ ಹತ್ತಿದ ಬಟ್ಟೆಗಳು ಇದ್ದವು. ಮಲ್ಲಪ್ಪನ ಗುಲಾಬಿ ಕಲರ ಶರ್ಟ್, ನೀಲಿ ಕಲರ ಜೀನ್ಸ ಪ್ಯಾಂಟ್ ಹಾಗೂ ಬನಿಯನ್ ಇತ್ತು. ಶಂಕರ ಗುಡದಿನ್ನಿ ಇವನಿಗೆ ಸೇರಿದ ತಿಳಿ ಕಲರ ಹಳದಿ ಚೌಕಡಿ ಅಂಗಿ, ಕಪ್ಪು ಮಿಶ್ರಿತ ಬೂದು ಬಣ್ಣದ ಪ್ಯಾಂಟು, ಬಿಳಿ ಬಣ್ಣದ ಹಾಪ್ ಬನಿಯನ್ ಹಾಗೂ ರಾಜು ಬಾಡಗಿ ಇವನ ನೀಲಿ ಕಲರ ತಿಳಿ ಅಂಗಿ, ಕಪ್ಪು ಪ್ಯಾಂಟ, ಹಾಪ್ ಬನಿಯನ್ ಇತ್ತು ಅವೆಲ್ಲವುಗಳು ರಕ್ತ ಆಗಿದ್ದವು. ಹಾಗೂ ಎರಡು ತಲವಾರ ಇದ್ದವು. ಹಾಗೂ ಅಲ್ಲಿ ನನ್ನ ಸಹಿ ಪಡೆದುಕೊಂಡರು. ಸ್ಥಳದಲ್ಲಿ ಎರಡು ಪೋಟೋ ತೆಗೆದಿದ್ದು ಅವುಗಳನ್ನು ನಿಪಿ-25 ಮತ್ತು 26 ಅಂತಾ ಗುರುತಿಸಲಾಯಿತು. ನಂತರ 7 ಪೋಟೋಗಳನ್ನು ತೆಗೆದುಕೊಂಡಿದ್ದಾರೆ. ಅವುಗಳನ್ನು ನಿಪಿ-27 ರಿಂದ 33 ಅಂತಾ ಗುರುತಿಸಲಾಯಿತು. ಈಗ ಒಂದು ನೀಲಿ ಬಣ್ಣದ ಅಂಡರವೇರ ನೋಡಿ ಸಾಕ್ಷಿ ಅದನ್ನು ನೋಡಿ ಗುರುತಿಸಲಿಲ್ಲ.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಎಸ್ ಎಸ್ ಪಿ ಟಿ ಕೆ ಎಮ್ ವೇಳೆ ಕೇಳಿದ್ದರಿಂದ ವೇಳೆ ನೀಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

**ವಿಶೇಷ ನ್ಯಾಯಾಧೀಶರು, ಬಾಗಲಕೋಟ.**